# ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 453/2023**

**CW : 03 PW: 02**

## ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 13.03.2026

| | |
|---|---|
| ಹೆಸರು | : ಮಹೇಶಕುಮಾರ ಹಿರೇಮಠ |
| ಗಂಡನ ಹೆಸರು | : ಮಾರ್ಖಂಡೇಯ ಹಿರೇಮಠ |
| ವಯಸ್ಸು | : 31 |
| ಉದ್ಯೋಗ | : ಎಸ್..ಐ ಅಬಕಾರಿ |
| ವಾಸಸ್ಥಳ | : ಚಿತ್ತಾಪೂರ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಚಿತ್ತಾಪೂರ ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕನು ಎಂದು ದಿ**: 25/07/2022** ರಿಂದ ಇಲ್ಲಿಯವರೆಗೂ ಕಾರ್ಯ ನಿರ್ವಹಿಸಿತ್ತಿದ್ದೇನೆ**.** ಈ ಪ್ರಕರಣದಲ್ಲಿ ನಾನು ದಿ**: 25/11/2022** ರಂದು ನಾನು ಚಾಸಾ**-8** ಇವರೊಂದಿಗೆ ಘಟನಾ ಸ್ಥಳಕ್ಕೆ ದಾಳಿ ಮಾಡಲು ಹೋಗಿದ್ದು ಇರುತ್ತದೆ**.** ಆ ಸಮಯದಲ್ಲಿ ಆರೋಪಿತಳು ಓಡಿ ಹೋಗುತ್ತಿದ್ದು**,** ಇದನ್ನು ಕಂಡ ಚಾಸಾ**-8** ಅವರನ್ನು ಹಿಡಿದಿದ್ದು ಇರುತ್ತದೆ**.** ಸ್ಥಳದಲ್ಲಿಯೇ ಶೋಧನಾ ವಾರಂಟನ್ನು ತಯಾರಿಸಿ ಆರೋಪಿತಳ ಮನೆಯನ್ನು ಪರಿಶೀಲಿಸಲಾಯಿತು**.** ಸದರಿ ಆರೋಪಿತಳ ಅಡುಗೆ ಮನೆಯ ಗ್ಯಾಸ ಕಟ್ಟೆಯ ಎದುರುಗಡೆ ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡು ಕಳ್ಳಭಟ್ಟಿಯನ್ನು ಕಾಯಿಸುತ್ತಿರುವುದು ಕಂಡು ಬಂದಿತು**.**

ಸದರಿ ಪಾತ್ರೆಯಲ್ಲಿ ಸುಮಾರು **1** ಲೀಟರಿನಷ್ಟು ಕಳ್ಳಭಟ್ಟಿ ಸರಾಯಿ ಕಂಡು ಬಂದಿತು. ಅದರ ಎಡಭಾಗದಲ್ಲಿ ಒಂದು ಹಸಿರು ಬಣ್ಣದ ಕೊಡದಲ್ಲಿ 10 ಲೀಟರನಷ್ಟು ಬೆಲ್ಲದ ಕೊಳೆ ಕಂಡುಬಂದಿತು. ದೊರೆತಿರುವ ಕಳ್ಳಭಟ್ಟಿ ಸರಾಯಿ ಮತ್ತು ಬೆಲ್ಲದ ಕೊಳೆಯನ್ನು ರಾಸಾಯನಿಕ ಪರೀಕ್ಷೆಗಾಗಿ 180 ಎಮ್.ಎಲ್. ಅಳತೆಯ ಬಾಟಲಿಯಲ್ಲಿ ಕಳ್ಳಭಟ್ಟಿಸರಾಯಿ ತೆಗೆದುಕೊಂಡು ನಂತರದಲ್ಲಿ ಇನ್ನೊಂದು 180 ಎಮ್.ಎಲ್. ಅಳತೆಯುಳ್ಳ ಬಾಟಲಿಯಲ್ಲಿ ಬೆಲ್ಲದ ಕೊಳೆಯನ್ನು ತೆಗೆದುಕೊಳ್ಳಲಾಯಿತು. ಸದರಿ ಬಾಟಲಿಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಪಂಚರಿಂದ ಸಹಿ ಮಾಡಿದ ಚೀಟಿಯನ್ನು ಅಂಟಿಸಿ ಇಲಾಖೆಗೆ ಸಂಬಂಧಪಟ್ಟ ಅರಕಿನ ಮೊಹರನ್ನು ಹಾಕಿರುತ್ತೇವೆ. ಆರೋಪಿತಳನ್ನು ನ್ಯಾಯಾಂಗ ಬಂಧನದಲ್ಲಿ ಇಟ್ಟಿದ್ದು ಇರುತ್ತದೆ. ನಂತರದಲ್ಲಿ ನಾನು ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-8 ಇವರಿಗೆ ಹಸ್ತಾಂತರ

ಮಾಡಿದ್ದು ಇರುತ್ತದೆ.

ಪ್ರ.ವ.ವರದಿಯನ್ನು ತೋರಿಸಲಾಗಿ, ಅದನ್ನು ನಿ.ಪಿ.2 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.2 (ಎ) ಎಂದು ನಿಶಾನೆಗೊಳಿಸಲಾಯಿತು. ನಾನು ಮುದ್ದೆ ಮಾಲುಗಳನ್ನು ಗುರುತಿಸಬಲ್ಲೆ, ಅವುಗಳನ್ನು ನೋಡಿ ಗುರುತಿಸಿದ್ದು, ಸದರಿ ಎರಡು ಬಾಟಲಿಗಳನ್ನು ಪ್ರತ್ಯೇಕವಾಗಿ ಮು.ಮಾ.1 ಮತ್ತು 2 ಎಂದು ನಿಶಾನೆಗೊಳಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ</u>**

ಭಾತ್ಮಿಯು ಬಂದಾಗ ನಾವು ಒಟ್ಟು ದಾಳಿ ಮಾಡಲು ಶಹಾಬಾದಗೆ ಬಂದಿದ್ದು ಇರುತ್ತದೆ. ನಾವು ನಮ್ಮ ವಾಹನವಾದ ಕೆ.ಎ-32, ಜಿ-1201 ನೇದ್ದರಲ್ಲಿ ಬಂದಿದ್ದು ಇರುತ್ತದೆ. ನಾವು ನಮ್ಮ ಠಾಣೆಯನ್ನು ಬಿಟ್ಟಾಗ ಸಮಯ 12 ಗಂಟೆ ಆಗಿತ್ತು. 12.45 ರ ಸುಮಾರಿಗೆ ಪಂಚರನ್ನು ನಾವು ಬರಮಾಡಿಕೊಂಡಿದ್ದು ಇರುತ್ತದೆ. 1 ಗಂಟೆ ಸುಮಾರಿಗೆ ಶೋಧನಾ ಸಮುಚ್ಚಿತ ವಾರಂಟನ್ನು ತಯಾರಿಸಿ ಮನೆಯನ್ನು ಶೋಧನೆಗೆ ಒಳಪಡಿಸಿದ್ದು ಇರುತ್ತದೆ. ಗುನ್ನಾ ಸ್ಥಳದ ಅಕ್ಕಪಕ್ಕ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಗುನ್ನಾ ಸ್ಥಳವಾದ ಮನೆಯ ವಿವರಣೆಯನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಸದರಿ ಸ್ಥಳವು ಜನರಿಂದ ಕೂಡಿದ ಪ್ರದೇಶ ಇರುತ್ತದೆ ಎಂದರೆ ಸರಿ.

ಚಾಸಾ-3 ರವರ ಆದೇಶದ ಮೇರೆಗೆ ನಾನು ಮತ್ತು ಚಾಸಾ-6 ಹಾಗೂ 7 ಸ್ಥಳಕ್ಕೆ ಹೋಗಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುನ್ನ ಸ್ಥಳವಾದ ಮನೆಯ ವಿವರಣೆಯನ್ನು ನನ್ನ ಹೇಳಿಕೆಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ. ಗುನ್ನಾ ಸ್ಥಳಕ್ಕೆ ಹೋದಾಗ ಮಹಿಳೆಯು ಓಡಿ ಹೋಗಿರುತ್ತಾಳೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಹಿಳೆಯು ಯಾವ ದಿಕ್ಕಿಗೆ ಓಡಿ ಹೋಗಿರುತ್ತಾಳೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ.

ಗುನ್ನಾ ಸ್ಥಳದ ಮನೆಯು ಎಷ್ಟು ಕೋಣೆಯಿಂದ ಕೂಡಿರುತ್ತದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಸದರಿ ಆರೋಪಿತಳು ಅಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡು ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿದ್ದಳು ಎಂದು ತೋರಿಸಲು ವಿದ್ಯುತ್ ಇಲಾಖೆಯಿಂದ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಆರೋಪಿತಳು ತಯಾರಿಸುತ್ತಿರುವ ಕಳ್ಳಭಟ್ಟಿಯ ಪಾತ್ರೆಯನ್ನು

ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಈ ಪಾತ್ರೆಯ ಗಾತ್ರ ಮತ್ತು ನಮೂನೆಯ ಕುರಿತು ನನ್ನ ಹೇಳಿಕೆಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

ಆರೋಪಿತಳು ಬೆಲ್ಲದ ಕೊಳೆಯನ್ನು ಇಟ್ಟಿರುವ ಹಸಿರು ಬಣ್ಣದ ಕೊಡವನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ಆರೋಪಿತಳ ಮನೆಯಲ್ಲಿ ದೊರೆತಿರುವ ಕಳ್ಳಭಟ್ಟಿ ಮತ್ತು ಬೆಲ್ಲದ ಕೊಳೆಯನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತಳನ್ನು ನ್ಯಾಯಾಂಗ ಬಂಧನದಲ್ಲಿ ಇಟ್ಟಿರುವುದಾಗಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಪಂಚರನ್ನು ನಾನೇ ಬರಮಾಡಿಕೊಂಡಿದ್ದು ಇರುತ್ತದೆ.

ನಾನು ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-8 ಇವರಿಗೆ ಹಸ್ತಾಂತರ ಮಾಡಿದ್ದು ಇರುತ್ತದೆಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳಿಗೆ ಬೆಂಬಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಮುದ್ದೆ ಮಾಲಿಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಮತ್ತು 2 ರಲ್ಲಿ ಖಾಲಿ ಬಾಟಲಿ ಇರುತ್ತವೆ ಎಂದರೆ ಸಾಕ್ಷಿದಾರರು ಅದರಲ್ಲಿರುವ ದ್ರವವನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಮು.ಮಾ.1 ಮತ್ತು 2 ರಂತೆ ಗುಜರಿ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸಾಕ್ಷಿದಾರರು ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆ :** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**

**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**